ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತೆಂಟನೆಯ ಅಧಿವೇಶನ

ಮಂಗಳವಾರ, ದಿನಾಂಕ : 23ನೇ ಜುಲೈ, 2019

ಆಲಮಟ್ಟಿ ಉದ್ಯಾನವನದಲ್ಲಿರುವ "ಸಿಲ್ವರ್ಲೇಕ್" ದೋಣಿ ವಿಹಾರದ ಗುತ್ತಿಗೆಯ ಕುರಿತು

ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-

520 (487) ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ವಿಜಯಪುರ ಜಿಲ್ಲೆ, ಆಲಮಟ್ಟಿ ಉದ್ಯಾನವನದಲ್ಲಿರುವ ಸಿಲ್ವರ್ಲೇಕ್ ದೋಣಿ ವಿಹಾರವನ್ನು ಯಾವ ವರ್ಷದಿಂದ ಪ್ರಾರಂಭಿಸಲಾಗಿದೆ ;

(ಆ) ಸದರಿ ದೋಣಿ ವಿಹಾರವು ಸ್ಥಗಿತಗೊಂಡಿರುತ್ತದೆಯೇ; ಹಾಗಿದ್ದಲ್ಲಿ ಎಷ್ಟು ಕಾಲ ಸ್ಥಗಿತಗೊಂಡಿರುತ್ತದೆ; ಸ್ಥಗಿತಗೊಂಡಿರುವುದಕ್ಕೆ ಕಾರಣಗಳೇನು ;

(ಇ) ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಯ ವತಿಯಿಂದ ನಿರ್ವಹಿಸಿದಾಗ ದೋಣಿ ವಿಹಾರಕ್ಕೆ ನಿಗದಿಪಡಿಸಿದ ದರ ಎಷ್ಟು; ಮತ್ತು ಗುತ್ತಿಗೆ ನೀಡಿದಾಗಿನ ದರವೆಷ್ಟು ? (ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೂ ವರ್ಷವಾರು ಸಂಪೂರ್ಣ ವಿವರ ನೀಡುವುದು)